ಸಿ.ಸಿ ನಂಃ 534/2022

ಡಿ ಡಬ್ಲುಃ 01

ಸಾಕ್ಷಿಯನ್ನು ದಿನಾಂಕಃ **03.11.2025** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಶ್ರೀ ಆರ್.ಎಸ್.ಹೆಚ್ ಪಿರ್ಯಾದಿ ಪರ ವಕೀಲರಿಂದಃ**

ನಾನು ಒಟ್ಟು 3 ಚೆಕ್ ನ್ನು ಶಂಭುಲಿಂಗಯ್ಯರವರಿಗೆ ಕೊಟ್ಟಿದ್ದೆನು. ನಾನು ಪ್ರತ್ಯುತ್ತರದ ನೋಟಿಸ್ಸಿನಲ್ಲಿ ದೈವಜ್ಞೆ ಕೋ-ಆಪರೇಟಿವ್ ಸೊಸೈಟಿಯವರು ಎರಡು ಚೆಕ್ ಗಳನ್ನು ಕೇಳುತ್ತಿದ್ದಾರೆ ಎಂದು ಬರೆಸಿದ್ದೇನೆಯೇ ಎಂದರೆ, ಸಾಕ್ಷಿಯು 3 ಚೆಕ್ ಗಳನ್ನು ಎಂದು ಬರೆಸಿದ್ದೇನೆ ಎಂದು ನುಡಿಯುತ್ತಾರೆ. ಹೀಗೆ ನಾನು ನನ್ನ ಪ್ರತ್ಯುತ್ತರದ ಎರಡನೇ ಪುಟದಲ್ಲಿ ಬರೆಸಿದ್ದು ತಪ್ಪಿರುತ್ತದೆಯೇ ಎಂದರೆ, ತಪ್ಪಿದೆ ಎಂದು ನುಡಿಯುತ್ತಾರೆ. ನಾನು ನನ್ನ ಪ್ರತ್ಯುತ್ತರದ ಮೂರನೇ ಪುಟದಲ್ಲಿ "ಹೀಗಿರಲಾಗಿ ------ ನಿನಗೆ ಪರತ್ ನೀಡುತ್ತೇನೆ" ಎಂದು ಬರೆಸಿರುತ್ತೇನೆಯೇ ಎಂದರೆ ಹೌದು. ಸದರಿ ದಿನಾಂಕ ಅಂದರೇ ದಿನಾಂಕಃ 27.05.2022 ರಂದು ಶಂಭುಲಿಂಗಯ್ಯರವರು ಮನೆಯಲ್ಲಿದ್ದರು ಎಂದರೆ, ಇದ್ದರು ಎಂದು ನುಡಿಯುತ್ತಾರೆ. ಸದರಿ ದಿನಾಂಕದಂದು ಆ ಕುರಿತು ವಿಚಾರಿಸುವಂತೆ ನಾನು ಮನೆಗೆ ಹೋಗಿದ್ದೆನು , ಆಫೀಸ್ ಗೆ ಹೋಗಿರಲಿಲ್ಲ ಎಂದರೆ ಸರಿ. ನಾನು ಕೊಟ್ಟಂತಹ ಮೂರು ಚೆಕ್ ಗಳು ದಿನಾಂಕಃ 30.06.2022 ರಂದು ಶಂಭುಲಿಂಗಯ್ಯರವರಿಗೆ ಸೇರಿದ ಆಫೀಸ್ ನ ಡ್ರಾವರನಲ್ಲಿ ಇರಬೇಕಿತ್ತು ಎಂದರೆ ಹೌದು. ಹಾಗದರೆ ಸದರಿ ಮೂರು ಚೆಕ್ ಗಳು ಕಚೇರಿಯ ಡ್ರಾವರನಲ್ಲಿ ಬರಲು ಹೇಗೆ ಸಾಧ್ಯ ಎಂದರೆ, ಅದು ನನಗೆ ಗೊತ್ತಿಲ್ಲ. ನಾನು ಹೇಳಿದ ಪ್ರಕಾರ ಮೂರು ಚೆಕ್ ಗಳು ಮನೆಯಲ್ಲಿ ಅಥವಾ ಸದರಿಎಲ್ಲಾ ಚೆಕ್ ಗಳು ಕಚೇರಿಯ ಡ್ರಾವರನಲ್ಲಿ ಸಿಗಬೇಕಿತ್ತು ಎಂದರೆ, ಸಾಕ್ಷಿಯು ಅವರು ಡ್ರಾವರನಲ್ಲಿಟ್ಟಿದ್ದಾಗಿ ಹೇಳಿದ್ದರು ಎಂದು ನುಡಿಯುತ್ತಾರೆ. ಸದರಿ ಚೆಕ್ ಗಳಿಗೆ ಸಂಬಂಧಿಸಿದಂತೆ ನಾನು ಆ ಕಾಲಕ್ಕೆ ಕ್ರಮವನ್ನು ಕೈಗೊಂಡಿದ್ದು ಇರುವುದಿಲ್ಲ. ಕ್ರಮವನ್ನು ಕೈಗೊಳ್ಳಲು ನನಗೆ ತೊಂದರೆ ಇರಲಿಲ್ಲ. ನಾನು ಒಟ್ಟು ಮೂರು ಪ್ರತ್ಯುತ್ತರ ನೋಟಿಸ್ಸುಗಳನ್ನು ಮೃತ ಶಂಭುಲಿಂಗಯ್ಯರವರ ಮಕ್ಕಳಿಗೆ ಕೊಟ್ಟಿರುತ್ತೇನೆ. ನಿಡಿ.5 ರಂತೆ ರಕ್ಷಣಾತ್ಮಕ ಹೇಳಿಕೆಯನ್ನು ನಾನು ಇನ್ನೂಳಿದ ಎರಡು ಪ್ರಕರಣಗಳಲ್ಲಿಯೂ ತೆಗೆದುಕೊಂಡಿರುತ್ತೇನೆಯೇ ಎಂದರೆ ಹೌದು. ನಾನು ನಿಡಿ.5 ರಲ್ಲಿ ದಿನಾಂಕಃ 30.06.2022 ರಂದು ಮೃತನ ಆಫೀಸ್ ಡ್ರಾವರ್ ನ್ನು ಸೊಸೈಟಿಯವರು ಪಂಚನಾಮೆ ಮಾಡಿ, ಅದರಲ್ಲಿದ್ದ, ಕಾಗದ ಪತ್ರಗಳನ್ನು ಮತ್ತು ಈ ಮೇಲಿನ ಎರಡು ಚೆಕ್ ಗಳನ್ನು ಪಂಚನಾಮೆ ಮಾಡಿ, ಮೃತರ ಹೆಂಡತಿಗೆ ಹಸ್ತಾಂತರ ಮಾಡಿದ್ದು ಇರುತ್ತದೆ ಎಂದು ನಮೂದು ಮಾಡಿದ್ದು, ಇದಕ್ಕೆ ಸಂಬಂಧಿಸಿದಂತೆ ನಾನು ದಾಖಲಾತಿಗಳನ್ನು ಹಾಜರುಪಡಿಸಿದ್ದೇನೆಯೇ ಎಂದರೆ ಇಲ್ಲ. ನಿಡಿ.5 ರಲ್ಲಿ ನಮೂದು ಮಾಡಿದ ವಿಷಯ ನಾನೇ ಸೃಷ್ಟಿ ಮಾಡಿಕೊಂಡ ಕಟ್ಟುಕತೆ ಆಗಿರುತ್ತದೆ ಎಂದರೆ ಸುಳ್ಳು. ನನಗೆ ಸಂಬಂಧಿಸಿದ ಬಿನಶೇತ್ಕಿ ಜಾಗವನ್ನು ಅಭಿವೃದ್ಧಿ ಪಡಿಸುವ ಸಲುವಾಗಿ ಪಿರ್ಯಾದಿಯವರ ಕಡೆಯಿಂದ ಹಂತ ಹಂತವಾಗಿ ದುಡ್ಡನ್ನು ಪಡೆದುಕೊಂಡಿದ್ದರೂ ಸಹಿತ, ಈಗ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ, ನಾನು ಬ್ಯಾಂಕಿನಿಂದ ಸಾಲವನ್ನು ತೆಗೆದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ನನ್ನ ಭಾದ್ಯತೆಯಿಂದ ತಪ್ಪಿಸಿಕೊಳ್ಳಲು ಈ ರೀತಿ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಇಲ್ಲ. ಸಾಕ್ಷಿಗೆ ನಿಪಿ.4 ನ್ನು ತೋರಿಸಲಾಗಿ, ಅದರಲ್ಲಿರುವ ಸಹಿ ತನ್ನದ್ದಾಗಿರುತ್ತದೆ ಎಂದು ಒಪ್ಪಿಕೊಂಡಿರುತ್ತಾರೆ. ಸಂಬಂಧಪಟ್ಟ ಇಲಾಖೆಯವರಿಂದ ಕಾಗದ ಪತ್ರಗಳನ್ನು ಸೃಷ್ಟಿ ಮಾಡಿಕೊಂಡು ಬಂದು ಈ ಪ್ರಕರಣದಲ್ಲಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಈ ಪ್ರಕರಣದಲ್ಲಿ ನೀಡಿದ ಮೌಖಿಕ ಹೇಳಿಕೆ ಮತ್ತು ಹಾಜರುಪಡಿಸಿದ ದಾಖಲಾತಿಗಳು ಪಿರ್ಯಾದಿ ದಾಖಲು ಮಾಡಿದ ದೂರಿಗೆ ಬಂದಾಯಿಸುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)**

ಓ ಹೆ ಕೇ ಸರಿ ಇದೆ.

**Sd/-**

**ಪ್ರ ದ ನ್ಯಾದಂ ಮುಂಡಗೋಡ.**